# ಮೂರು ಮರಗಳ ಕಥೆ







**ಕಾ**ಡಿನೊಳಗೆ ಸಣ್ಣ ಗುಡ್ಡದ ಮೇಲೆ ಮೂರು ಬೃಹತ್ ಮರಗಳಿದ್ದುವು. ತಮ್ಮ ಮುಂದಿನ ದಿನಗಳ ಕನಸು ಕಾಣುತ್ತಿದ್ದ ಅವುಗಳು ಹೀಗೆ ಮಾತನಾಡಿದವು.

ಮೊದಲನೇ ಮರ ಹೇಳಿತು –"ನಾನು ಮುಂದೊಂದು ದಿನ ದೊಡ್ಡ ಐಶ್ವರ್ಯವನ್ನು ಒಳಗೊಂಡ ಖಜಾನೆಯಾಗುವೆ. ಸುಂದರ ಕೆತ್ತನೆಗಳಿಂದ ಕೂಡಿದ ಖಜಾನೆಯಾಗಿ ಪರಿವರ್ತಿಸಲ್ಪಟ್ಟ ನನ್ನೊಳಗೆ ಅಪಾರವಾದ ಚಿನ್ನ, ಬೆಳ್ಳಿ, ರತ್ನಗಳು ತುಂಬಿರುವುವು".

ಎರಡನೇ ಮರ ಹೇಳಿತು –"ನಾನು ಒಂದು ಬೃಹತ್ತಾದ ಹಡಗು ಆಗಲು ಬಯಸುವೆ. ರಾಜ ಮಹಾರಾಜರು, ರಾಣಿಯರು ನನ್ನ ಮೇಲೆ ಕುಳಿತು ಪ್ರಯಾಣಿಸುವರು. ನನ್ನ ಶಕ್ತಿಯ ಮೇಲೆ ಅವರು ಭರವಸೆ ಇಟ್ಟು ಜಗತ್ತಿನ ಮೂಲೆ ಮೂಲೆಗೂ ಪ್ರಯಾಣಿಸುವರು".

ಮೂರನೇ ಮರ ಹೇಳಿತು – "ನಾನು ಕಾಡಿನೊಳಗೇ ಬೃಹತ್ ಪ್ರಮಾಣಕ್ಕೆ ಬೆಳೆಯುವ ಕನಸನ್ನು ಹೊತ್ತಿದ್ದೇನೆ. ನನ್ನ ಎತ್ತರ ಗಾತ್ರಗಳನ್ನು ನೋಡಿದ ಜನ ಓ! ಇದು ದೇವರಿಗೂ ಸ್ವರ್ಗಕ್ಕೂ ಎಷ್ಟು ಹತ್ತಿರವಾಗಿದೆಯಲ್ಲಾ! ಅಂದುಕೊಳ್ಳುವರು".

ಎಷ್ಟೋ ವರ್ಷಗಳವರೆಗೂ ಹೀಗೆ ಹಾರೈಸುತ್ತಾ ಇರುವಾಗ ಒಂದು ದಿನ ಮರ ಕಡಿಯುವವರು ಬಂದರು.

ಮೊದಲನೇ ಮರವನ್ನು ಕಡಿಯಲಾರಂಭಿಸಿದವನಂದುಕೊಂಡ –ಓ! ಈ ಮರವು ಎಷ್ಟು ಗಟ್ಟಿಯಾಗಿದೆ. ಇದನ್ನು ನಾನು ಕಡಿದು ಬಡಗಿಗೆ ಕೊಡುವೆ. ಮರಕ್ಕೆ ಸಂತಸವಾಯಿತು. ನನ್ನನ್ನು ಒಂದು ಖಜಾನೆಯಾಗಿ ಆ ಬಡಗಿಯು ಪರಿವರ್ತಿಸುತ್ತಾನೆಂದು ಅದು ಅಂದುಕೊಂಡಿತು. ಆದರೆ ಆ ಬಡಗಿಯು ಅದನ್ನು ದನಗಳಿಗೆ ಮೇವು ಹಾಕುವ ದೋಣಿಯನ್ನಾಗಿ ಮಾರ್ಪಡಿಸಿದ. ಅದನ್ನು ಹುಲ್ಲು ತುಂಬಿಸುವ ಒಂದು







ದನದ ಹಟ್ಟಿಯಲ್ಲಿ ಇಡಲಾಯಿತು.

ಎರಡನೇ ಮರವೂ ಬಲು ಗಟ್ಟಿಯಾಗಿಯೇ ಇತ್ತು. ಆದರೆ ಅದರ ಹಾರೈಕೆಗೆ ವ್ಯತಿರಿಕ್ತವಾಗಿ, ಅದನ್ನು ಕಡಿದು ಒಂದು ಸಣ್ಣ ಮೀನು ಹಿಡಿಯುವ ದೋಣಿಯಾಗಿ ಪರಿವರ್ತಿಸಲಾಯಿತು. ಅದಕ್ಕೆ ಬಹಳ ದುಃಖವಾಯಿತು.

ಮೂರನೇ ಮರದ ಬಳಿ ಕಡಿಯುವವರು ಬಂದಾಗ ಅದಕ್ಕೆ ಬಹಳ ಭಯವಾಯಿತು. ತನ್ನನ್ನು ಕಡಿಯುವುದು ಅದಕ್ಕೆ ಇಷ್ಟವಿರಲಿಲ್ಲ. ಆದರೆ, ಮರ ಕಡಿಯುವವರು ಅದರಿಂದ ಸದ್ಯಕ್ಕೆ ಏನು ಮಾಡಲೂ ಉದ್ದೇಶಿಸಿರಲಿಲ್ಲವಾದುದರಿಂದ, ಅದನ್ನು ದೊಡ್ಡ ದೊಡ್ಡ ತುಂಡು ಮಾಡಿ, ಅಲ್ಲೇ ನೆರಳಿನಲ್ಲಿ ಹಾಕಿದರು.

ವರುಷಗಳು ಉರುಳಿದವು ಆ ಮರಗಳೂ ತಮ್ಮ ಕನಸುಗಳನ್ನು ಮರೆತವು.

ಮುಂದೊಂದು ದಿನ ಒಬ್ಬ ಮನುಷ್ಯನು ತನ್ನ ಹೆಂಡತಿಯೊಂದಿಗೆ ಆ ಹಟ್ಟಿಗೆ ಬಂದನು. ಆ ಹೆಂಗಸು ಒಂದು ಗಂಡುಮಗುವನ್ನು ಹೆತ್ತು ಆ ಮೇವಿನ ದೋಣಿಯೊಳಗಿನ ಒಣ ಹುಲ್ಲಿನ ಮೇಲೆ ಆ ಮಗುವನ್ನು ಮಲಗಿಸಿದಳು. ಆ ಮರದ ದೋಣಿಯು ಆ ಮಗುವಿಗೆ ತೊಟ್ಟಿಲಾಯಿತು. ಜಗತ್ತಿನ ಅತಿ ದೊಡ್ಡ ಐಶ್ವರ್ಯವು ಹೀಗೆ ಆ ಮರದ ಮೇಲೆ ಇಡಲ್ಪಟ್ಟಿತು.

ವರುಷಗಳು ಕಳೆದುವು. ಒಂದು ಗುಂಪು ಜನರು ಎರಡನೇ ಮರದಿಂದ ಮಾಡಿದ ಸಣ್ಣದೋಣಿಯೊಳಗೆ ಕುಳಿತುಕೊಂಡಿದ್ದರು. ಅವರಲ್ಲಿ ಒಬ್ಬಾತನು ದಣಿದು ಮಲಗಿದ್ದನು. ಆಗ ದೊಡ್ಡ ಬಿರುಗಾಳಿ ಬೀಸಿತು ಮತ್ತು ಆ ಮರದ ದೋಣಿಗೆ ತಾನು ಆ ಜನರನ್ನು ರಕ್ಷಿಸಲಾರನೆಂಬ ಭಯವುಂಟಾಯಿತು. ಆ ಜನರು ಮಲಗಿದ್ದಾತನನ್ನು ಎಬ್ಬಿಸಿದರು. ಆತನು ಎದ್ದು ನಿಂತು ಬಿರುಗಾಳಿಯನ್ನು ಗದರಿದಾಗ ಶಾಂತವಾಯಿತು. ಆಗ ಆ ಎರಡನೇ ಮರದ ದೋಣಿಗೆ ಅರಿವಾಯಿತು - ತಾನು ರಾಜರ ರಾಜನನ್ನೇ ಹೊತ್ತಿದ್ದೇನೆಂದು.

ಕೊನೆಗೆ ಒಂದು ದಿನ ಮೂರನೇ ಮರದ ದೊಡ್ಡ ತುಂಡನ್ನು ಜೋಡಿಸಿ, ಒಬ್ಬನ ಮೇಲೆ ಹೊರಿಸಿದರು. ಅವನು ಅದನ್ನು ಹೊತ್ತೊಯ್ಯುವಾಗ ಜನರು ಹಾಸ್ಯಮಾಡಿದರು. ಅವರು ಒಂದಾನೊಂದು ಸ್ಥಳಕ್ಕೆ ತಲುಪಿದಾಗ, ಮೊಳೆಗಳಿಂದ ಆತನ ಶರೀರವನ್ನು ಆ ಮರಕ್ಕೆ ಜಡಿದರು. ಗುಡ್ಡದ ಮೇಲೆ ಅದನ್ನು ನೇರವಾಗಿಟ್ಟು ಆತನನ್ನು ಸಾಯಲು ಬಿಟ್ಟರು. ಮೂರನೇ ದಿನದಲ್ಲಿ ಆ ಮರಕ್ಕೆ ಅರಿವಾಯಿತೇನೆಂದರೆ ತಾನು ದೇವರಿಗೆ ಎಷ್ಟು ಸಮೀಪವಾಗಿದ್ದೇನೆಂದು! ಏಕೆಂದರೆ ಯೇಸುವು ಅದರ ಮೇಲೆ ಶಿಲುಬೆಗೇರಿಸಲ್ಪಟ್ಟಿದ್ದನು!.

ನೀನು ನೆನೆಸಿದಂತೆ ನಿನ್ನ ಜೀವನ ನಡೆಯುತ್ತಿಲ್ಲವಾದರೆ, ನಿನಗಾಗಿ ದೇವರ ಉದ್ದೇಶ ಬೇರೆಯೇ ಇದೆಯೆಂದು ತಿಳಿದುಕೋ. ಆ ಮೂರು ಮರಗಳೂ ತಾವು ಬಯಸಿದ್ದನ್ನೇ ಪಡೆದುವು. ಆದರೆ ತಾವು ತಿಳಿದುಕೊಂಡ ದಾರಿಯಿಂದಲ್ಲ!.

ನಮ್ಮ ಕುರಿತು ದೇವರ ಯೋಜನೆ ಏನೆಂದು ನಮಗೆ ಯಾವಾಗಲೂ ತಿಳಿದಿರುವುದಿಲ್ಲ. ಆತನ ಮಾರ್ಗವು ನಮ್ಮ ಮಾರ್ಗವಲ್ಲವೆಂದು ನಾವು ತಿಳಿದಿರಬೇಕು. ಒಂದು ಮಾತಂತೂ ನಿಶ್ಚಿತ ಆತನ ಮಾರ್ಗವು ಯಾವಾಗಲೂ ಅತ್ಯುತ್ತಮ ಮಾರ್ಗವೇ ಆಗಿದೆ.

ಸಂಗ್ರಹ : ಸುನಯನ ವಾಲ್ಟರ್ಸ್

## ಜನವರಿ 2010 ಬುದ್ಧಿಗೊಂದು ಕಸರತ್ತಿನ ವಾಗ್ದಾನಗಳ ವಾಕ್ಯಭಾಗಗಳು (ಉತ್ತರಗಳಿಗೆ)

ಆಧಾರ ಗ್ರಂಥ - ಯೆಶಾಯ

| | | | |
|---|---|---|---|
| 1 | -1:19 | 21 | -46:4 |
| 2 | -10:27 | 22 | -51:16 |
| 3 | -11:1 | 23 | -54:3 |
| 4 | -19:20 | 24 | -54:8 |
| 5 | -19:20 | 25 | -54:10 |
| 6 | -22:21 | 26 | -54-11 |
| 7 | -23:18 | 27 | -55:11 |
| 8 | -25:8 | 28 | -56:5 |
| 9 | -30:18 | 29 | -57:13 |
| 10 | -33:16 | 30 | -58:9 |
| 11 | -32:15 | 31 | -58-11 |
| 12 | -31:5 | 32 | -60:20 |
| 13 | -32:3 | 33 | -65:18 |
| 14 | -41:16 | 34 | -66:18 |
| 15 | -41:27 | 35 | -62:2 |
| 16 | -42:3 | 36 | -48:6 |
| 17 | -42:9 | 37 | -43:19 |
| 18 | -42:16 | 38 | -41:15 |
| 19 | -43:12 | 39 | -7:14 |
| 20 | -45:3 | 40 | -4:3 |